# ಬೆಂಗಳೂರಿನ ಗಾರ್ಮೆಂಟ್ಸ್ ಕಾರ್ಖಾನೆಗಳು ಮುಚ್ಚುತ್ತವೆಯೇ?– ಇಲ್ಲ!

- *ಗಾರ್ಮೆಂಟ್ಸ್ ಕಾರ್ಖಾನೆಗಳ ವ್ಯಾಪಾರ ಕಡಿಮೆಯಾಗಿಲ್ಲ, ಅವುಗಳ ಲಾಭವೂ ಕಡಿಮೆಯಾಗಿಲ್ಲ.*
- *ಹಲವಾರು ದೊಡ್ಡ ದೊಡ್ಡ ಗಾರ್ಮೆಂಟ್ಸ್ ಕಾರ್ಖಾನೆಗಳು ಕಾರ್ಮಿಕರಿಂದ ಪ್ರತಿದಿನವೂ ಒ.ಟಿ ಮಾಡಿಸುವಷ್ಟು ಕೆಲಸವನ್ನು ಹೊಂದಿದೆ.*
- *ಯಾವುದೇ ದೊಡ್ಡ ಕಾರ್ಖಾನೆಗಳು ಮುಚ್ಚಿಲ್ಲ ಹಾಗೂ ಕಾರ್ಮಿಕರನ್ನು ಕೆಲಸದಿಂದ ತೆಗೆದು ಹಾಕಿಲ್ಲ.*
- *ಕಾರ್ಖಾನೆಗಳು ಸರ್ಕಾರದ ಅನುಮತಿಯಿಲ್ಲದೆ ಮುಚ್ಚುವ ಹಾಗಿಲ್ಲ.*

ಆತ್ಮೀಯ ಕಾರ್ಮಿಕ ಮಿತ್ರರೇ,

ಬೆಂಗಳೂರಿನಾದ್ಯಂತ "ಗಾರ್ಮೆಂಟ್ಸ್ ಕಾರ್ಖಾನೆಗಳು ಮುಚ್ಚುತ್ತವೆ, ಕಾರ್ಮಿಕರೆಲ್ಲ ಕೆಲಸ ಕಳೆದುಕೊಳ್ಳಲಿದ್ದಾರೆ" ಎಂಬ ಸುದ್ದಿ ಹರಡಿದೆ. ಜಾಗತಿಕ ಆರ್ಥಿಕ ಕುಸಿತವು ಗಾರ್ಮೆಂಟ್ಸ್ ಉದ್ಯಮದ ಮೇಲೆ ಬಹುವಾಗಿ ಪರಿಣಾಮ ಬೀರುತ್ತದೆ ಎಂದು, ಗಾರ್ಮೆಂಟ್ಸ್ ಕಾರ್ಖಾನೆಗಳು, ಕೆಲವು ಪತ್ರಿಕೆಗಳು ಹಾಗೂ ಸರ್ಕಾರ ಹೇಳುತ್ತಿವೆ.

**ಈ ಸುದ್ದಿ ನಿಜವಲ್ಲ !!!!!**

ಬೆಂಗಳೂರಿನಲ್ಲಿರುವ ಎರಡು ಪ್ರಮುಖ ಗಾರ್ಮೆಂಟ್ಸ್ ಕಂಪನಿಗಳಾದ ಗೋಕಲ್‌ದಾಸ್ ಎಕ್ಸ್‌ಪೋರ್ಟ್ಸ್ ಹಾಗೂ ಬಾಂಬೆರೆಯಾನ್ ಫ್ಯಾಷನ್ಸ್ ಲಿ. ಕಂಪನಿಗಳು 2008 ನೇ ಇಸವಿಯಲ್ಲಿ ತಲಾ ರೂ. 1000 ಕೋಟಿಗಳ ವಹಿವಾಟು ನಡೆಸಿವೆ. ಇದು ಆ ಕಂಪನಿಗಳು ನಡೆಸಿರುವ ಈ ವರೆಗಿನ ಅತಿಹೆಚ್ಚು ವಹಿವಾಟಾಗಿದೆ. 2007 ರ ಸೆಪ್ಟೆಂಬರ್‌ನಿಂದ ಡಿಸೆಂಬರ್ ವರೆಗೆ ನಾಲ್ಕು ತಿಂಗಳ ಅವಧಿಯಲ್ಲಿ ಬಾಂಬೆರೆಯಾನ್ ಫ್ಯಾಶನ್ಸ್ ಲಿ. ಕಂಪನಿಯು ರೂ. 245 ಕೋಟಿಗಳಷ್ಟು ವಹಿವಾಟು ನಡೆಸಿದ್ದು, 2008 ರ ಅದೇ ಸಮಯದಲ್ಲಿ (ಸೆಪ್ಟೆಂಬರ್‌ನಿಂದ ಡಿಸೆಂಬರ್) ರೂ. 345 ಕೋಟಿಗಳಷ್ಟು ವಹಿವಾಟು ನಡೆಸಿದೆ. 2007 ಹಾಗು 2008 ರಲ್ಲಿ ಈ ಕಂಪನಿಯ ಲಾಭಾಂಶವು 25% ಆಗಿದ್ದು, ಅದರಲ್ಲಿ ಯಾವುದೇ ಇಳಿಕೆಯಾಗಿಲ್ಲ. ಕಂಪನಿಗಳ ಈ ಅಂಕಿ ಅಂಶಗಳು ಅವರ ವಹಿವಾಟಿನಲ್ಲಾಗಲೀ, ಲಾಭಾಂಶದಲ್ಲಾಗಲೀ ಯಾವುದೇ ರೀತಿಯಲ್ಲಿ ಇಳಿಕೆಯಾಗಿಲ್ಲ ಎಂಬುದನ್ನು ತೋರಿಸುತ್ತದೆ.

ಡಿಸೆಂಬರ್ 2008 ರಲ್ಲಿ ಗಾರ್ಮೆಂಟ್ ಅಂಡ್ ಟೆಕ್ಸ್‌ಟೈಲ್ ವರ್ಕರ್ಸ್ ಯೂನಿಯನ್ (GATWU)ನ ಪ್ರತಿನಿಧಿಗಳು ಬಾಂಬೆ ರೆಯಾನ್ ಫ್ಯಾಷನ್ಸ್ ಲಿ. ಕಂಪನಿಯ ಮಾಲೀಕರೊಂದಿಗೆ ಚರ್ಚೆಯ ನಡೆಸಿದ ಸಂದರ್ಭದಲ್ಲಿ, ಬರುವ ದಿನಗಳಲ್ಲಿ ಕಂಪನಿಯು ತನ್ನ ವ್ಯಾಪಾರವನ್ನು ಗಣನೀಯಪ್ರಮಾಣದಲ್ಲಿ ಹೆಚ್ಚಿಸಿಕೊಳ್ಳಲಿದೆ ಎಂದು ತಿಳಿದುಬಂದಿದೆ. ಭಾರತದ ಸಿದ್ಧ ಉಡುಪು ಉದ್ಯಮವು ಚೀನಾ ದೇಶಕ್ಕೆ ಪೈಪೋಟಿ ನೀಡುತ್ತಿವುದರಿಂದ ದೊಡ್ಡ ದೊಡ್ಡ ಬ್ರಾಂಡ್‌ಗಳ ಆರ್ಡರ್‌ಗಳು ಚೀನಾವನ್ನು ಬಿಟ್ಟು ಭಾರತಕ್ಕೆ ಬರುತ್ತಿವೆ.

ಗೋಕಲ್‌ದಾಸ್ ಎಕ್ಸ್‌ಪೋರ್ಟ್ಸ್, ಗೋಕಲ್‌ದಾಸ್ ಇಮೇಜಸ್, ಬಾಂಬೆ ರೆಯಾನ್ ಫಾಷನ್ಸ್, ಟೆಕ್ಸ್‌ಪೋರ್ಟ್ಸ್ ಓವರ್‌ಸೀಸ್, ಶಾಹಿ ಎಕ್ಸ್‌ಪೋರ್ಟ್ಸ್ ನಂತಹ ಪ್ರಮುಖ ಗಾರ್ಮೆಂಟ್ಸ್ ಕಂಪನಿಗಳ ಕಾರ್ಖಾನೆಗಳಲ್ಲಿ ಓವರ್ ಟೈಮ್ (ಒ.ಟಿ) ನಡೆಯುತ್ತಲೇ ಇದೆ ಎಂದು ನಮಗೆ ತಿಳಿದು ಬಂದಿದೆ. ಈ ಕಂಪನಿಗಳ ಯಾವ ಕಾರ್ಖಾನೆಯೂ ಮುಚ್ಚಿಲ್ಲ ಮತ್ತು ತನ್ನ ಕಾರ್ಮಿಕರನ್ನು ಹೆಚ್ಚಿನ ಸಂಖ್ಯೆಯಲ್ಲಿ ಕೆಲಸದಿಂದ ತೆಗೆದು ಹಾಕಿಲ್ಲ.

ಕಾರ್ಖಾನೆ ಮುಚ್ಚುತ್ತದೆ ಎಂದಾಗಲೀ, ಕೆಲಸದಿಂದ ತೆಗೆಯುತ್ತೇವೆ ಎಂದಾಗಲೀ, ನಿಮ್ಮ ಕಾರ್ಖಾನೆಯ ಮಾಲೀಕರು ಬೆದರಿಸಿದರೆ, ಆತಂಕ ಪಟ್ಟುಕೊಳ್ಳಬೇಡಿ. ಇದು, ಕಾರ್ಮಿಕರು ತಮ್ಮ ಹಕ್ಕುಗಳನ್ನು ಕೇಳದಿರಲಿ ಎಂದು ಮಾಲೀಕರು ಅನುಸರಿಸುತ್ತಿರುವ ಒಂದು ತಂತ್ರ ಎಂದು ನೆನಪಿನಲ್ಲಿಡಿ. ನಿಮ್ಮ ಕನಿಷ್ಠ ವೇತನ ಪರಿಷ್ಕರಣೆಯಾಗಬೇಕು ಎಂದು ನೆನಪಿಸಿಕೊಳ್ಳಿ, 2007ರಲ್ಲಿ ರಚನೆಯಾದ ಕನಿಷ್ಠ ವೇತನದ ಪರಿಷ್ಕರಣಾ ಸಮಿತಿಯು ಗಾರ್ಮೆಂಟ್ಸ್ ಕಾರ್ಮಿಕರ ವಿಷಯವಾಗಿ ಒಂದು ಬಾರಿಯೂ ಸಭೆ ಸೇರಿಲ್ಲ. ಈ ಬಗ್ಗೆ ಸರ್ಕಾರವೂ ಸಹ ಮರೆತಿದೆ. ಕನಿಷ್ಠ ವೇತನದ ಪರಿಷ್ಕರಣೆಗಾಗಿ ನಾವುಗಳು ಆಂದೋಲನವನ್ನೂ ಸಹ ಆಯೋಜಿಸುವುದು ಅತ್ಯಗತ್ಯವಾಗಿದೆ.

ಯಾವುದೇ ಕಾರ್ಖಾನೆಯನ್ನು ಮಾಲೀಕರಿಗೆ ಇಷ್ಟ ಬಂದಾಗ ಮುಚ್ಚಲು ಸಾಧ್ಯವಿಲ್ಲ, ಸರ್ಕಾರಕ್ಕೆ ಅರ್ಜಿ ಸಲ್ಲಿಸಿ ಅನುಮತಿ ಪಡೆಯಬೇಕಾಗುತ್ತದೆ. ಈ ರೀತಿ ಮಾಡದೆ ಇದ್ದಕ್ಕಿದ್ದಂತೆ ಕಾರ್ಖಾನೆ ಮುಚ್ಚಿದರೆ ಅದು ಕಾನೂನಿಗೆ ವಿರುದ್ಧವಾಗುತ್ತದೆ.

**ದಯವಿಟ್ಟು ಗಮನಿಸಿ, ನಿಮ್ಮ ಕಾರ್ಖಾನೆಗಳಲ್ಲಿ, ಕಾರ್ಖಾನೆ ಮುಚ್ಚುತ್ತದೆ ಎಂದು ಬೆದರಿಕೆ ಒಡ್ಡಿದರೆ ಹಾಗೂ ಈ ಕಾರಣ ನೀಡಿ ನಿಮ್ಮ ವೇತನವನ್ನು ಕಡಿತಗೊಳಿಸಿದರೆ, ಮತ್ತು 8 ಗಂಟೆಗಳಿಗಿಂತ ಹೆಚ್ಚು ಗಂಟೆಗಳ ಕಾಲ ಕೆಲಸ ಮಾಡಿ ಎಂದು ನಿಮ್ಮನ್ನು ಬಲವಂತ ಪಡಿಸಿದರೆ, ಗಾರ್ಮೆಂಟ್ ಅಂಡ್ ಟೆಕ್ಸ್‌ಟೈಲ್ ವರ್ಕರ್ಸ್ ಯೂನಿಯನ್ (GATWU)ಅನ್ನು ಈ ಕೆಳಗಿನ ವಿಳಾಸದಲ್ಲಿ ಅಥವಾ ಸಂಖ್ಯೆಯಲ್ಲಿ ಸಂಪರ್ಕಿಸಿ**

**ಗಾರ್ಮೆಂಟ್ ಅಂಡ್ ಟೆಕ್ಸ್‌ಟೈಲ್ ವರ್ಕರ್ಸ್ ಯೂನಿಯನ್, (GATWU)**

C/o. ನಂ 8/3, ಶ್ರೀಮಾತಾ ನಿಲಯ, ನ್ಯೂ ಟಿಂಬರ್‌ಯಾರ್ಡ್ ಲೇಔಟ್, ಮೈಸೂರು ರಸ್ತೆ, ಬೆಂಗಳೂರು-26, ಮೊಬೈಲ್: 9980863795

ನಂ 91, 2ನೇ ಮುಖ್ಯರಸ್ತೆ, 5ನೇ ಅಡ್ಡರಸ್ತೆ, 3 ನೇ ಫೇಸ್, ರಾಜಗೋಪಾಲನಗರ ಮುಖ್ಯರಸ್ತೆ, ಗಣಪತಿನಗರ, ಪೀಣ್ಯ-58,

ಮೊ: 9880371922, 9972243583